1075 (1601) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಟರಿ ವ್ಯವಹಾರಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು? (ವಿವರ ನೀಡುವುದು):

ಆ) ಒಂದಂಕಿ ಲಾಟರಿ ಮತ್ತು ಪ್ಲೇವಿನ್ ಹಾಗೂ ಅದೇ ರೀತಿಯ ಲಾಟರಿಗಳನ್ನು ನಿಷೇಧಿಸಬೇಕೆಂಬ ನಾಗರೀಕರ ಮನವಿಯ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ರಾಮಚಂದ್ರ ಗೌಡ (ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರದ ಹಾಗೂ ಇತರೆ ರಾಜ್ಯ ಸರ್ಕಾರದ ಲಾಟರಿಗಳಿಂದ ಕೆಳಕಂಡಂತೆ ವರಮಾನ ಸ್ವೀಕೃತವಾಗಿರುತ್ತದೆ.

ವರ್ಷ	ಲಾಟರಿ ಟಿಕೇಟುಗಳ ಮಾರಾಟದಿಂದ (ರೂ.ಕೋಟಿಗಳಲ್ಲಿ)	ಲಾಟರಿ ಮೇಲಿನ ಕರದಿಂದ (ರೂ.ಕೋಟಿಗಳಲ್ಲಿ)	ಒಟ್ಟು (ರೂ.ಕೋಟಿಗಳಲ್ಲಿ)
2003–04	ರೂ.50–00	ರೂ.43.56	ರೂ.93–56
2004–05	ರೂ.90–00	ರೂ.76–03	ರೂ.166–03
2005–06	ರೂ.90–00	ರೂ.75–83	ರೂ.165–83
		ಒಟ್ಟು :	ರೂ.425–42

ಆ) ಆನ್‌ಲೈನ್ ಲಾಟರಿಯನ್ನು ಈಗಾಗಲೇ ನಿಷೇಧಿಸಿದ್ದು ಸಾಂಪ್ರದಾಯಿಕ ಪೇಪರ್ ಲಾಟರಿಯನ್ನು ನಿಷೇಧಿಸುವ ಬಗೆಗಿನ ಪ್ರಶ್ನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ. ಕೇಂದ್ರ ಸರ್ಕಾರದ ಲಾಟರಿ (ಕ್ರಮಬದ್ಧತೆ) ಅಧಿನಿಯಮ 1998ರನ್ವಯ ಒಂದಂಕಿ ಲಾಟರಿಯನ್ನು ನಡೆಸಲು ಆಸ್ಪದ ಇಲ್ಲ.

1078 (1596) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಣಿ ಸಂಗ್ರಹಾಲಯಗಳ ಸಂಖ್ಯೆ ಎಷ್ಟು;

ಆ) ಪ್ರಾಣಿ ಸಂಗ್ರಹಾಲಯಗಳು ಇರುವ ಸ್ಥಳಗಳು ಯಾವುವು;

ಇ) ರಾಜ್ಯದಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸೂಕ್ತವೆನಿಸಿದ ಕಡೆಗಳಲ್ಲಿ ಪ್ರಾಣಿ ಸಂಗ್ರಹಾಲಯಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೇ;

ಈ) ಬಿಜಾಪುರ ಜಿಲ್ಲೆಯಲ್ಲಿ ಅತ್ಯಂತ ರಮಣೀಯ ಪ್ರವಾಸೋದ್ಯಮ ಸ್ಥಳವಾಗಿ ಬೆಳೆಯುತ್ತಿರುವ ಆಲಮಟ್ಟಿ ಜಲಾಶಯದ ಹತ್ತಿರ ಪ್ರವಾಸಿಗರನ್ನು ಆಕರ್ಷಿಸಲು ಉತ್ತರ ಕರ್ನಾಟಕದ ಈ ಭಾಗದಲ್ಲಿ ಪ್ರಾಣಿ ಸಂಗ್ರಹಾಲಯವನ್ನು ಸ್ಥಾಪಿಸಲಾಗುವುದೇ;